ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.428/2025</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಇಮ್ರಾನ್ ಖಾನ್ | ಪಿ.ಡಬ್ಲ್ಯೂ.3 |
| ತಂದೆಯ ಹೆಸರು | : | ಜಾಫರ್ ಖಾನ್ | ಸಿ.ಡಬ್ಲ್ಯೂ.6 |
| ವಯಸ್ಸು | : | 45 ವರ್ಷ | |
| ವೃತ್ತಿ | : | ಹೆಚ್.ಸಿ. 157, ಆಲ್ದೂರು ಪೊಲೀಸ್ ಠಾಣೆ | |
| ವಾಸ | : | ಚಿಕ್ಕಮಗಳೂರು | |

<u>ದಿನಾಂಕಃ 29-04-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ನಾನು ಜನವರಿ 2020 ರಿಂದ ಆಗಸ್ಟ್ 2025 ರವರೆಗೆ ಚಿಕ್ಕಮಗಳೂರು ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ17.02.2025 ರಂದು ಚಾಸಾ-1 ರವರು ಸಂಜೆಃ 06.30 ಗಂಟೆಗೆ ವರದಿ, ಮಹಜರ್ ಹಾಗೂ ಸ್ವತ್ತನ್ನು ತಂದು ನೀಡಿರುತ್ತಾರೆ. ವರದಿಯನ್ನು ಸ್ವೀಕರಿಸಿ ಠಾಣಾ ಎನ್.ಸಿ ನಂ.35/25 ರಂತೆ ನೊಂದಾಯಿಸಿ ಮುಂದಿನ ತನಿಖೆಗಾಗಿ ನ್ಯಾಯಾಲಯದ ಅನುಮತಿಗಾಗಿ ಕಳುಹಿಸಿಕೊಟ್ಟಿರುತ್ತೇನೆ. ಎನ್.ಸಿ ಯನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-4(ಎ) ಇರುತ್ತದೆ. ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-5(ಎ) ಇರುತ್ತದೆ. ದಿಃ18.02.2025 ರಂದು

ನಮ್ಮ ಠಾಣಾ ಹೆಚ್.ಸಿ ರಾಜುರವರು ನ್ಯಾಯಾಲಯದ ಅನುಮತಿ ಪತ್ರವನ್ನು ತಂದುಕೊಟ್ಟ ಮೇರೆಗೆ ಪ್ರಕರಣವನ್ನು ದಾಖಲಿಸಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅನುಮತಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-6(ಎ) ಇರುತ್ತದೆ. ಪ್ರ.ವ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-7(ಎ) ಇರುತ್ತದೆ. ನಂತರ ಅಮಾನತ್ತುಪಡಿಸಿದ ಮುದ್ದೆ ಮಾಲುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿರುತ್ತೇನೆ. ನಂತರ ಚಾಸಾ-2 ರಿಂದ 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ಚಾಸಾ-4 ರವರು ಸಿ.ಡಿ. ಗೆ ವರ್ಗಾಯಿಸಿ ದೃಢೀಕರಣ ಪತ್ರವನ್ನು ನೀಡಿದ್ದು ಅದನ್ನು ಸಿ.ಡಿ ಗೆ ವರ್ಗಾಯಿಸಿರುತ್ತೇನೆ. ಒಂದು ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಸಿ.ಡಿ ಯನ್ನು ನೋಡುತ್ತಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-10(ಎ) ಇರುತ್ತದೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ದಿನ ನನ್ನ ಮುಂದೆ ಹಾಜರುಪಡಿಸಿದ ರೂ.1,020/- ನಗದು ಹಣ (200 ರೂಪಾಯಿ ಮುಖ ಬೆಲೆಯ 3 ನೋಟುಗಳು, 100 ರೂಪಾಯಿ ಮುಖಬೆಲೆಯ 4 ನೋಟುಗಳು, 20 ರೂಪಾಯಿ ಮುಖಬೆಲೆಯ 1 ನೋಟು) ನ್ನು ನೋಡುತ್ತಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಅದೇ ರೀತಿ ಬಾಲ್ ಪೆನ್ ಮತ್ತು ಮಟ್ಕಾ

ಚೀಟಿಯನ್ನು ನೋಡುತ್ತಿದ್ದು ಅದನ್ನು ಮು.ಮಾ.2 ಮತ್ತು 3 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ಜೂಜಾಟದ ಬಗ್ಗೆ ಇಂತಿಷ್ಟು ಪ್ರಕರಣಗಳನ್ನು ದಾಖಲಿಸಬೇಕೆಂದು ನಮ್ಮ ಠಾಣೆಗೆ ಆದೇಶ ಇರುತ್ತದೆ ಎಂದರೆ ಸರಿಯಲ್ಲ. ಅಂತಹ ಆದೇಶ ಇರುವ ಕಾರಣ ಆರೋಪಿಯ ವಿರುದ್ಧ ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಸುಳ್ಳಾಗಿ ಸೇರ್ಪಡಿಸಿರುವ ಕಾರಣದಿಂದ ನಾನು ಪ್ರಥಮ ಬಾರಿಗೆ ತಪ್ಪಾದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಒಬ್ಬರೇ ಜೂಜಾಟ ಆಡಲು ಸಾಧ್ಯವಿಲ್ಲ ಎಂದರೆ ಸರಿ. ಸದರಿ ಜೂಜಾಟವನ್ನು ಯಾರು ಯಾರು ಆಡಿರುತ್ತಾರೆ ಎನ್ನುವ ಬಗ್ಗೆ ನಾನು ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜೂಜಾಟವನ್ನು ಆಡಿದವರ ಬಗ್ಗೆ ದೋಷಾರೋಪಣೆ ಪಟ್ಟಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮು.ಮಾ.1 ನಗದು ಹಣವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ದೃಢೀಕರಣ ಪತ್ರದಲ್ಲಿ ಸಿ.ಡಿ ಯ ಮೆಮೋರಿ ಕೆಪ್ಯಾಸಿಟಿ ಹಾಗೂ ಬರ್ನ್ ಆದ ಕೆಪ್ಯಾಸಿಟಿ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಎಲ್ಲಾ ಠಾಣೆಗೂ ಕೂಡಾ ಕ್ಯಾಮೆರಾವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನಮ್ಮ ಠಾಣೆಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಿ.ಡಿ ಹಾಗೂ ಫೋಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ-1 ರವರು ನನ್ನ ಮುಂದೆ ವರದಿ, ಮಹಜರ್ ಮತ್ತು ಆರೋಪಿಯನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲ ಎಂದು ಕಂಡುಬಂದಿದ್ದರೂ ಕೂಡಾ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ